# ಜಿಲ್ಲಾಧಿಕಾರಿಗಳ ನ್ಯಾಯಾಲಯ, ಕೋಲಾರ ಜಿಲ್ಲೆ, ಕೋಲಾರ

ದಿನಾಂಕ:30/09/2015

ಪ್ರಕರಣ ಸಂಖ್ಯೆ: ಆರ್‌ಎ 17/2014-15

ಉಪಸ್ಥಿತರು: ಡಾ|| ಕೆ.ವಿ.ತ್ರಿಲೋಕಚಂದ್ರ ಭಾ.ಆ.ಸೇ.,
ಜಿಲ್ಲಾಧಿಕಾರಿಗಳು,
ಕೋಲಾರ ಜಿಲ್ಲೆ.

| ಮೇಲ್ಮನವಿದಾರರು | ವಿರುದ್ಧ | ಎದುರುದಾರರು |
|---|---|---|
| 1. ಶ್ರೀ ಬಿ.ಜೆ.ಅನಿಲ್ ಕುಮಾರ್ ಬಿನ್ ಜನಾರ್ಧನರೆಡ್ಡಿ<br>2. ಶ್ರೀ ನಂದೀಶ್ ಬಿನ್ ಲಚ್ಚಪ್ಪ<br>-ದೇವರಬಿಸನಹಳ್ಳಿ ಗ್ರಾಮ<br>ಬೆಲ್ಲಂಡೂರು ಅಂಚೆ<br>ಬೆಂಗಳೂರು ಪೂರ್ವ ತಾಲ್ಲೂಕು<br>(ಶ್ರೀ ಜಿ.ಆರ್ ಸುಬ್ಬಾರೆಡ್ಡಿ<br>-ವಕೀಲರು ರವರಿಂದ) | | 1. ರಾಜಸ್ವ ನಿರೀಕ್ಷಕರು<br>ಲಕ್ಕೂರು ಹೋಬಳಿ<br>ಮಾಲೂರು ತಾಲ್ಲೂಕು<br>2. ತಹಶೀಲ್ದಾರ್<br>ಮಾಲೂರು ತಾಲ್ಲೂಕು |

ವಿಷಯ:ಮಾಲೂರು ತಾಲ್ಲೂಕು, ಲಕ್ಕೂರು ಹೋಬಳಿ ಕಲ್ಕೆರೆ ಗ್ರಾಮದ ಕಂದಾಯ ಆದಾಲತ್ ಕ್ರಮಾಂಕ:ಆರ್‌ಆರ್‌ಟಿ.ಕಂ.ಸಿಆರ್80/2013-14 ದಿನಾಂಕ:03-02-2014 (ಎಂ.ಆರ್. ಹೆಚ್ 64/13-14) ರ ಆದೇಶದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

0-0-0

## ಪ್ರಸ್ತಾವನೆ.

ಮಾಲೂರು ತಾಲ್ಲೂಕು ಲಕ್ಕೂರು ಹೋಬಳಿ ಕಲ್ಕೆರೆ ಗ್ರಾಮದ ಸ.ನಂ 6/1 ಮತ್ತು 6/2 ರಲ್ಲಿ ಒಟ್ಟು 0.39 ½ ಗುಂಟೆ ಜಮೀನಿನ ವಹಿವಾಟು ಸಂಖ್ಯೆ:79 ಎಂ ಆರ್ ಹೆಚ್ 64/2013-14 ಹಕ್ಕು ಬದಲಾವಣೆ ಆದೇಶವನ್ನು ರದ್ದುಪಡಿಸಿ ಶ್ರೀ ಬಿ.ಜೆ.ಅನಿಲ್ ಕುಮಾರ್ ಬಿನ್ ಜನಾರ್ಧನರೆಡ್ಡಿ ಮತ್ತು ಶ್ರೀ ನಂದೀಶ್ ಬಿನ್ ಲಚ್ಚಪ್ಪ ರವರು ಜಂಟಿಯಾಗಿ ಅರ್ಜಿ ಸಲ್ಲಿಸಿದ ಮೇರೆಗೆ ಪ್ರಕರಣವನ್ನು ವಿಚಾರಣೆಗಾಗಿ ದಾಖಲಿಸಿಕೊಂಡು ಉಭಯತ್ರರಿಗೂ ನೋಟೀಸ್ ನೀಡಲಾಯ್ತು.

## ಪ್ರಕರಣದ ಸಂಕ್ಷಿಪ್ತ ವಿವರ,

1. ಮಾಲೂರು ತಾಲ್ಲೂಕು ಲಕ್ಕೂರು ಹೋಬಳಿಯಲ್ಲಿ ದಿನಾಂಕ:03-02-2014 ರಂದು ನಡೆದ ಕಂದಾಯ ಆದಾಲತ್‌ನಲ್ಲಿ ಚಿಕ್ಕತಿರುಪತಿ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಯ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ(ಎಸ್‌ಡಿಎಂಸಿ) ಅಧ್ಯಕ್ಷರು ಕಂದಾಯ ಆದಾಲತ್‌ನಲ್ಲಿ ಅರ್ಜಿ ಸಲ್ಲಿಸಿ ಸದರಿ ಶಾಲೆಗೆ ಕಲ್ಕೆರೆ ಗ್ರಾಮದ ಸ.ನಂ 6 ರಲ್ಲಿ 3-00 ಎಕರೆ ಜಮೀನು ಕೆ.ಶಂಕರ್‌ನಾರಾಯಣ ಬಿನ್ ಗುಂಡಪ್ಪ ರವರಿಂದ ದಿನಾಂಕ:31-08-1956 ರಲ್ಲಿ ಭೂದಾನವಾಗಿ ನೀಡಿದ್ದು ಪಹಣಿಯಲ್ಲಿ 2-06 ಎಕರೆ ದಾಖಲಾಗಿದ್ದು ಉಳಿದ 34 ಗುಂಟೆ ಜಮೀನು ಕೈ ಬಿಟ್ಟಿರುವುದನ್ನು ತಿದ್ದುಪಡಿ ಮಾಡಿ ಶಾಲೆಯ ಜಮೀನನ್ನು ಉಳಿಸಿಕೊಡುವಂತೆ ಕೋರಿದ್ದರ ಮೇರೆಗೆ ಆದಾಲತ್ ಅಧಿಕಾರಿಗಳಾದ ಮಾನ್ಯ ಜಿಲ್ಲಾಧಿಕಾರಿಗಳು ಆರ್‌ಆರ್‌ಟಿ/ಕಂ.ಸಿಆರ್ 80/2013-14 ರಲ್ಲಿ ದಿನಾಂಕ:03-02-2014 ರ ಆದೇಶದಂತೆ ಲಕ್ಕೂರು ಹೋಬಳಿ ರಾಜಸ್ವ ನಿರೀಕ್ಷಕರ ವಹಿವಾಟು ಸಂಖ್ಯೆ:79 ಎಂ ಅರ್ ಹೆಚ್ 64/2013-14 ರಲ್ಲಿ ದಿನಾಂಕ:15-06-2014 ರಂತೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಚಿಕ್ಕತಿರುಪತಿ ಹೆಸರಿಗೆ ಸ.ನಂ 6 ರಲ್ಲಿ 3 ಎಕರೆ ಜಮೀನಿಗೆ ಮ್ಯುಟೇಶನ್ ಅಂಗೀಕರಿಸಿರುತ್ತಾರೆ.

...2

2. ಅರ್ಜಿದಾರರ ವಕೀಲರು ಸಲ್ಲಿಸಿರುವ ಲಿಖಿತ ವಾದದಲ್ಲಿ ಮಾಲೂರು ತಾಲ್ಲೂಕು ಲಕ್ಕೂರು ಹೋಬಳಿ ಕಲ್ಕೆರೆ ಗ್ರಾಮದ ಸ.ನಂ 6 ರಲ್ಲಿ 9 ಎಕರೆ 0-36 ಗುಂಟೆ ಜಮೀನು ಮೂಲತಃ ಕೆ.ಶಂಕರ ನಾರಾಯಣ ಬಿನ್ ಗುಂಡಪ್ಪ ಎಂಬುವರಿಗೆ ಸೇರಿದ್ದು ಇವರು ಈ ಪೈಕಿ 3 ಎಕರೆ ಜಮೀನನ್ನು ದಿನಾಂಕ: 23-08-1956 ರಂದು ಸರ್ಕಾರಿ ಶಾಲೆಗೆ ದಾನವಾಗಿ ನೀಡಿರುತ್ತಾರೆಂದು ಹಾಗೂ ದಿನಾಂಕ:07-06-1957 ರಂದು 1 ಎಕರೆ 0-30 ಗುಂಟೆ ಜಮೀನನ್ನು ನಂಜಪ್ಪ ಮತ್ತು ಮಾರಪ್ಪ ರವರಿಗೂ ಮತ್ತು ದಿನಾಂಕ: 31-07-1967 ರಂದು 0-30 ಗುಂಟೆ ಜಮೀನನ್ನು ಬೀಬಿಜಾನ್ ಕೋಂ ಹಿಮಾಂಸಾಬಿ ರವರಿಗೆ ಮಾರಾಟ ಮಾಡಿರುತ್ತಾರೆಂದು ನಿವೇದಿಸಿರುತ್ತಾರೆ. ಬೀಬಿಜಾನ್ ರವರು ಕ್ರಯಕ್ಕೆ ಪಡೆದುಕೊಂಡಿದ್ದ 0-30 ಗುಂಟೆ ಹಾಗೂ ಖರಾಬು 0.9½ ಗುಂಟೆ ಸೇರಿ ಒಟ್ಟು 0.39½ ಗುಂಟೆ ಜಮೀನಿನಲ್ಲಿ ಸ್ವಾಧೀನಾನುಭವದಲ್ಲಿದ್ದು, ನಂತರ ಸದರಿ 0.39½ ಗುಂಟೆ ಜಮೀನು ದಿನಾಂಕ:06/05/2009 ರಂದು ನೋಂದಾಯಿತ ಕ್ರಯ ಪತ್ರದ ಮೂಲಕ ಬಿ.ಜಿ.ಅನಿಲ್ ಕುಮಾರ್ ಬಿನ್ ಜನಾರ್ಧನರೆಡ್ಡಿ ರವರಿಗೆ ಮಾರಾಟ ಮಾಡಿದ್ದಾರೆಂದು ವಾದಿಸಿರುತ್ತಾರೆ. ಸದರಿ ಕ್ರಯ ಪತ್ರದಂತೆ ಇವರ ಹೆಸರಿಗೆ ಖಾತೆ ಮತ್ತು ಫಹಣಿ ದಾಖಲಾಗಿದ್ದು ಇವರೇ ಈ ಜಮೀನಿನಲ್ಲಿ ಸಾಗುವಳಿ ಮಾಡಿಕೊಂಡು ಅನುಭವದಲ್ಲಿರುತ್ತಾರೆಂದು, ಮೋಜಣಿದಾರರು ಈ ಜಮೀನನ್ನು ಅಳತೆ ಮಾಡಿ ದುರಸ್ತಿಪಡಿಸಿದ ನಂತರ ಹೊಸ ಸ..ನಂ 6/2 ಆಗಿರುತ್ತದೆಂದು ನಿವೇದಿಸಿರುತ್ತಾರೆ. ಸ.ನಂ.6 ರಲ್ಲಿನ 9 ಎಕರೆ 0-36 ಗುಂಟೆ ಜಮೀನಿನ ಮೂಲ ಮಾಲೀಕರಾಗಿರುತ್ತಾರೆಂದು ಕೆ.ಶಂಕರನಾರಾಯಣ ರವರು ಒಟ್ಟು 5 ಎಕರೆ 20 ಗುಂಟೆ ಜಮೀನು ಮಾರಾಟ ಮಾಡಿದ ನಂತರ ಉಳಿದ 4 ಎಕರೆ 15 ಗುಂಟೆ ವಿಸ್ತೀರ್ಣದ ಜಮೀನಿನಲ್ಲಿ ಇವರೇ ಸಾಗುವಳಿ ಮಾಡಿಕೊಂಡು ಅನುಭವದಲ್ಲಿರುತ್ತಾರೆಂದು ವಾದಿಸಿರುತ್ತಾರೆ. ಹೀಗಿರುವಾಗ ಸರ್ಕಾರಿ ಶಾಲೆಯ ಪ್ರಾಧಿಕಾರದವರು ಸುಳ್ಳು ಅರ್ಜಿ ಸಲ್ಲಿಸಿದರ ಮೇರೆಗೆ ಕಂದಾಯ ಆದಾಲತನಲ್ಲಿನ ಅಧಿಕಾರಿಗಳು ಅರ್ಜಿದಾರರು 34 ಗುಂಟೆ ಸರ್ಕಾರಿ ಶಾಲೆಯ ಜಮೀನು ಒತ್ತುವರಿ ಮಾಡಿಕೊಂಡಿರುವುದಾಗಿ ತಪ್ಪಾಗಿ ನಿರ್ಣಯಿಸಿರುತ್ತಾರೆಂದು ತಿಳಿಸಿರುತ್ತಾರೆ. ಶಾಲೆಗೆ ದಾನವಾಗಿ ನೀಡಿರುವ ಜಮೀನಿನ ದಿನಾಂಕ;23/08/1956 ರ ದಾನಪತ್ರ ಹಾಗೂ ದಿನಾಂಕ;07/06/1957 ಮತ್ತು ದಿನಾಂಕ:31/07/1967 ರ ಕ್ರಯ ಪತ್ರಗಳನ್ನು ಪರಿಶೀಲಿಸಿದಾಗ ಸರ್ಕಾರಿ ಶಾಲೆಯ ಜಮೀನನ್ನು ಅರ್ಜಿದಾರರಾಗಲೀ ಅಥವಾ ಇವರು ಯಾರಿಂದ ಸದರಿ ಜಮೀನು ಖರೀದಿ ಮಾಡಿದರೋ ಅವರಾಗಲೀ ಒತ್ತುವರಿ ಮಾಡಿಲ್ಲವೆಂಬುದು ಸ್ಪಷ್ಟವಾಗುತ್ತದೆ ಎಂಬುದಾಗಿ ವಾದಿಸಿರುತ್ತಾರೆ.

ಕೆ.ಶಂಕರನಾರಾಯಣರವರಿಗಾಗಲೀ ಅಥವಾ ಇವರ ಕುಟುಂಬದವರಿಗಾಗಲೀ ಯಾವುದೇ ಸಂಬಂದವಿಲ್ಲದಿದ್ದರೂ ಕೆ.ಎಸ್ ಬಾಲಕೃಷ್ಣ ಎಂಬುವರು ಕ್ರಯ ಪತ್ರದ ನಂ.703 ರಂತೆ ದಿನಾಂಕ: 07-04-1960 ರಂದು ಸ.ನಂ 6 ರಲ್ಲಿ 2 ಎಕರೆ 0.17½ ಎಕರೆ ಜಮೀನನ್ನು ಶಿವಾನಂದ ಸ್ವಾಮಿ ಎಂಬುವರಿಗೆ ಮಾರಾಟ ಮಾಡಿರುತ್ತಾರೆ ಹಾಗೂ ಅದೇ ದಿನಾಂಕ:07-04-1960 ರಂದು ಕ್ರಯಪತ್ರ ನಂ.704 ರಂತೆ ಕೋಟೀರಪ್ಪ ಎಂಬುವರಿಗೆ ಸ.ನಂ 6 ರಲ್ಲಿ 2-17½ ಎಕರೆ ಜಮೀನನ್ನು ಮಾರಾಟಮಾಡಿರುತ್ತಾರೆ ನಿವೇದಿಸಿರುತ್ತಾರೆ. ಸದರಿ ಕ್ರಯಪತ್ರಗಳಲ್ಲಿ ಕೆ.ಎಸ್ ಬಾಲಕೃಷ್ಣ ರವರು ತನಗೆ ಅರ್ಧ ಭಾಗದ ಹಕ್ಕು ಇದೇ ಎಂದು ತಿಳಿಸಿರುತ್ತಾರೆ. ವಾಸ್ತವವಾಗಿ ಕೆ.ಎಸ್ ಬಾಲಕೃಷ್ಣ ರವರಿಗೆ ಈ ಜಮೀನಿನಲ್ಲಿ ಯಾವುದೇ ಹಕ್ಕು ಇರುವುದಿಲ್ಲ. ಆದ್ದರಿಂದ ಇವರದಲ್ಲದ ಜಮೀನನ್ನು ದಿನಾಂಕ:07-04-1960 ರಂದು ಮೇಲ್ಕಂಡ ಇಬ್ಬರು ವ್ಯಕ್ತಿಗಳಿಗೆ ಮಾರಾಟ ಮಾಡಿರುವ ಎರಡು ಸುಳ್ಳು ಕ್ರಯಪತ್ರಗಳಿಂದಾಗಿ ಅರ್ಜಿದಾರರು ಸರ್ಕಾರಿ ಶಾಲೆಯ 34 ಗುಂಟೆ ಜಮೀನನ್ನು ಒತ್ತುವರಿ ಮಾಡಿರುವುದಾಗಿ ಕಂದಾಯ ಆದಾಲತನಲ್ಲಿ ಅಧಿಕಾರಿಗಳು ತಪ್ಪು ನಿರ್ಣಯಕ್ಕೆ ಬಂದು ನಂ:ಆರ್ಆರ್ಟಿ./ಕಂ./ಸಿಆರ್80/13-14 ರಂತೆ ದಿನಾಂಕ:03-02-2014 ರಂದು ಹೊರಡಿಸಿದ ಆದೇಶದಲ್ಲಿ ಹಿಸ್ಸಾ ಪೋಡಿಯನ್ನು ರದ್ದುಪಡಿಸಿ ಅರ್ಜಿದಾರರ ಹೆಸರಿಗೆ 0.05½ ಗುಂಟೆ ಜಮೀನು ಖಾತೆಯನ್ನು ದಾಖಲಿಸಲು ಆದೇಶಿಸಿರುವುದು ಕಾನೂನುಬಾಹಿರವಾಗಿರುತ್ತದೆ ಎಂದು ವಾದಿಸಿ ಸದರಿ ಆದೇಶಗಳನ್ನು ರದ್ದುಪಡಿಸಿ ಹಿಸ್ಸಾ ಪೋಡಿಯಂತೆ 6/2 ರಲ್ಲಿನ 0.39½ ಗುಂಟೆ ಜಮೀನು ಮೇಲ್ಮನವಿದಾರರ ಹೆಸರಿಗೆ ಖಾತೆ ಮುಂದುವರೆಸಲು ಕೋರಿರುತ್ತಾರೆ.

...3

3. ಅರ್ಜಿದಾರರು ಹಾಗೂ ಅವರ ವಕೀಲರು ಸಲ್ಲಿಸಿರುವ ದಾಖಲೆ ಹಾಗೂ ಲಿಖಿತವಾದ ಮತ್ತು ತಹಶೀಲ್ದಾರ್, ಮಾಲೂರು ತಾಲ್ಲೂಕು ರವರು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಲಾಯ್ತು.ಹಿಂದಿನ ಕಂದಾಯ ದಾಖಲೆಯಾದ ಇಂಡೆಕ್ಸ್ ಆಫ್ ಲ್ಯಾಂಡ್(ಐ.ಎಲ್) ದಾಖಲೆಯಂತೆ ಸ.ನಂ 6 ರಲ್ಲಿ 9 ಎಕರೆ 33 ಗುಂಟೆ ಜಮೀನು ಇದ್ದು ಈ ಪೈಕಿ 03 ಗುಂಟೆ ಖರಾಬು ಜಾತ 9 ಎಕರೆ 30 ಗುಂಟೆ ಜಮೀನು ಬಾಲಕೃಷ್ಣ ಬಿನ್ ಸೀತಾರಾಮಯ್ಯ, ಶಂಕರನಾರಾಯಣ ಬಿನ್ ಗುಂಡಪ್ಪ ಎಂಬುವರ ಹೆಸರಿಗೆ ದಾಖಲಾಗಿರುತ್ತದೆ. ಈ ಪೈಕಿ ಬಾಲಕೃಷ್ಣ ರವರು ನೋಂದಾಯಿತ ದಸ್ತಾವೇಜು ಪತ್ರ ಸಂಖ್ಯೆ: 52/60-61 ದಿನಾಂಕ:07-04-1960 ರಂದು 2 ಎಕರೆ 17½ ಗುಂಟೆ ಜಮೀನು ಶಿವಾನಂದ ಸ್ವಾಮಿಯವರಿಗೆ ಹಾಗೂ ಅದೇ ದಿನ ನೋಂದಾಯಿತ ದಸ್ತಾವೇಜು ಪತ್ರ ಸಂಖ್ಯೆ:53/60-61 ದಿನಾಂಕ: 07-04-1960 ರಂತೆ 2 ಎಕರೆ 17½ ಗುಂಟೆ ಜಮೀನು ತೋಟಿರೆಪ್ಪ ಬಿನ್ ತೋಟಿಲಕ್ಷ್ಮಗ ಎಂಬುವರಿಗೆ ಮಾರಾಟ ಮಾಡಿರುತ್ತಾರೆ. ಉಳಿದ ಜಮೀನಿನ ಪೈಕಿ ಕೆ.ಶಂಕರನಾರಾಯಣ ರವರು 3 ಎಕರೆ ಜಮೀನು ದಿನಾಂಕ:31-08-1956 ರಂದು ಸರ್ಕಾರಿ ಶಾಲೆಗೆ ದಾನವಾಗಿ ನೀಡಿರುತ್ತಾರೆ ಮತ್ತು 1 ಎಕರೆ 30 ಗುಂಟೆ ಜಮೀನು ನೋಂದಾಯಿತ ದಸ್ತಾವೇಜು ಪತ್ರ ಸಂಖ್ಯೆ:1017/57-58 ದಿನಾಂಕ:07-06-1957 ರಂದು ನಂಜಪ್ಪ ಮತ್ತು ಮಾರಪ್ಪ ರವರಿಗೆ ಮಾರಾಟ ಮಾಡಿರುತ್ತಾರೆ. ನಂತರ ಈ ಸ.ನಂ ನಲ್ಲಿ 05 ಗುಂಟೆ ಜಮೀನು ಮಾತ್ರ ಉಳಿಕೆ ಇರುತ್ತದೆ ಆದರೆ ಶಂಕರನಾರಾಯಣ ರವರು ನೋಂದಾಯಿತ ದಸ್ತಾವೇಜು ಪತ್ರ ಸಂಖ್ಯೆ;1366/67-68 ದಿನಾಂಕ;31-07-1967 ರಲ್ಲಿ 30 ಗುಂಟೆ ಜಮೀನನ್ನು ಬೀಬಿಜಾನ್ ಕೋಂ ಇಮಾಂಸಾಬ್ ರವರಿಗೆ ಮಾರಾಟ ಮಾಡಿರುತ್ತಾರೆ. ನಂತರ ಬೀಬಿಜಾನ್ ರವರು ಬಿ.ಜಿ.ಅನಿಲ್ ಕುಮಾರ್ ಬಿನ್ ಜನಾರ್ಧನರೆಡ್ಡಿ ರವರಿಗೆ 0.39½ ಗುಂಟೆ ಜಮೀನನ್ನು ನೋಂದಾಯಿತ ದಸ್ತಾವೇಜು ಪತ್ರ ಸಂಖ್ಯೆ:361/09-10 ರಂತೆ ದಿನಾಂಕ:06-05-09 ರಂದು ಮಾರಾಟ ಮಾಡಿರುತ್ತಾರೆ. ಈ ಎರಡೂ ಕ್ರಯಪತ್ರಗಳು ಕಾನೂನು ಬಾಹಿರವಾಗಿರುತ್ತದೆ. ಅರ್ಜಿದಾರರು ತಾನು ಬೀಬಿಜಾನ್ ರವರಿಂದ 0.39½ ಗುಂಟೆ ಜಮೀನು ಕ್ರಯಕ್ಕೆ ಪಡೆದುಕೊಂಡಿದುವುದರಿಂದ ತನ್ನ ಹೆಸರಿಗೆ ಇರುವ ಖಾತೆಯನ್ನು ಮುಂದುವರೆಸುವಂತೆ ಕೋರಿರುವ ವಾದದಲ್ಲಿ ಸಮರ್ಥನೆಯಿರುವುದಿಲ್ಲ. ಶಂಕರನಾರಾಯಣ ರವರು ಸರ್ಕಾರಿ ಶಾಲೆಗೆ 3 ಎಕರೆ ದಾನವಾಗಿ ನೀಡಿದ್ದು ಫಹಣಿಯಲ್ಲಿ 2 ಎಕರೆ 06 ಗುಂಟೆ ನಮೂದಾಗಿದ್ದು ಇದನ್ನು ಸರಿಪಡಿಸಲು ಕೋರಿ ಸರ್ಕಾರಿ ಶಾಲೆಯ ಅಭಿವೃದ್ಧಿ ಮೇಲುಸ್ತುವಾರಿ ಸಮಿತಿ ಯವರು ಕಂದಾಯ ಆದಾಲತ್ ಅಧಿಕಾರಿಗಳಿಗೆ ಅರ್ಜಿ ಸಲ್ಲಿಸಿದ ಮೇರೆಗೆ ದಾಖಲೆಗಳನ್ನು ಪರಿಶೀಲಿಸಿದ ಅಧಿಕಾರಿಗಳು ಪ್ರಶ್ನಿತ ಆದೇಶ ಮಾಡಿರುವುದು ಕ್ರಮಬದ್ಧವಾಗಿರುತ್ತದೆ.

## ಆದೇಶ

ಮೇಲ್ಕಂಡವಿ ಅರ್ಜಿಯನ್ನು ವಜಾಕರಿಸಿದೆ.

ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ಉಖ್ತಲೇಖನ ನೀಡಿ, ಬೆರಳಚ್ಚು ಮಾಡಿಸಿ ಪರಿಷ್ಕರಿಸಿದೆ. ನಂತರ ದಿನಾಂಕ: 30/09/2015 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಿದೆ.

(ಸಹಿ)
ಜಿಲ್ಲಾಧಿಕಾರಿಗಳು
ಕೋಲಾರ ಜಿಲ್ಲೆ

ನಿಜ ನಕಲು,
(ಸಹಿ)
ಜಿಲ್ಲಾಧಿಕಾರಿಗಳ ಪರವಾಗಿ
ಕೋಲಾರ ಜಿಲ್ಲೆ.
9/10/15